ಕರ್ನಾಟಕ ವಿಧಾನ ಸಭೆ

105; ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ವಿಧಾನ ಸಭೆ ಸದಸ್ಯರು

ಅ) ರಾಜ್ಯದಲ್ಲಿ ಪೊಲೀಸ್ ವಸತಿಗೃಹ ನಿರ್ಮಾಣಕ್ಕಾಗಿ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್‌ಗೆ ಎಷ್ಟು ಅನುದಾನ ನೀಡಲಾಗಿದೆ; ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು);

ಆ) ಬೀದರ್ ಜಿಲ್ಲೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳು ನಿಗಧಿತ ಸಮಯದಲ್ಲಿ ಮುಗಿಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ನಿಗದಿತ ಸಮಯದಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಏನು ಕ್ರಮ ಜರುಗಿಸುವುದು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ರಾಜ್ಯದಲ್ಲಿ ವಸತಿಗೃಹಗಳ ನಿರ್ಮಾಣಕ್ಕಾಗಿ ಎಹೆಚ್‌ಎಸ್–3 ಯೋಜನೆಯಡಿಯಲ್ಲಿ ರು 264.00 ಕೋಟಿ ಮತ್ತು ಪೊಲೀಸ್ ಗೃಹ 2020 ಯೋಜನೆಗೆ 2013–14ನೇ ಸಾಲಿನಲ್ಲಿ ರು 20.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2014–15 ಸಾಲಿನಲ್ಲಿ ಚಾಲ್ತಿಯಲ್ಲಿರುವ ವಸತಿಗೃಹಗಳ ನಿರ್ಮಾಣ ಯೋಜನೆಗಳಿಗೆ ರು 70.90 ಕೋಟಿ ನಿಗಧಿಪಡಿಸಿದ್ದು, ಇಲ್ಲಿಯವರೆಗೆ ರು 35.45 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳ ವಿವರಗಳನ್ನು ಅನುಬಂಧ ಎ ಮತ್ತು ಬಿ ನಲ್ಲಿ ಒದಗಿಸಿದೆ.

ಆ) ಬೀದರ್ ಜಿಲ್ಲೆಯಲ್ಲಿ ಎಹೆಚ್‌ಎಸ್–3 ಯೋಜನೆಯಡಿಯಲ್ಲಿ 68 ವಸತಿಗೃಹಗಳನ್ನು ನಿರ್ಮಾಣ ಮಾಡಲಾಗಿದ್ದು, ಇಲಾಖೆಯ ವಶಕ್ಕೆ ಪಡೆಯಲಾಗಿದೆ. ಪೊಲೀಸ್ ಗೃಹ 2020 ಯೋಜನೆಯಡಿಯಲ್ಲಿ 260 ವಸತಿಗೃಹಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

2013–14ನೇ ಸಾಲಿನ ಆಧುನೀಕರಣ ಯೋಜನೆ ಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಹುಮ್ನಾಬಾದ್ ಸಂಚಾರಿ ಪೊಲೀಸ್ ಠಾಣೆಯನ್ನು ನಿರ್ಮಿಸಲಾಗುತ್ತಿದ್ದು, ನ್ಯಾಯಾಲಯದ ತಡೆ–ಯಾಜ್ಞೆಯಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ.

ಇ) ನ್ಯಾಯಾಲಯದಿಂದ ತಡೆಯಾಜ್ಞೆ ತೆರವಾದ ನಂತರ ಸದರಿಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಬೆಂಗಳೂರಿನ ನಂದಿನಿ ಬಡಾವಣೆಯನ್ನು ರೆಗ್ಯುಲರೈಸ್ ಮಾಡುವುದು

51(191); ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರಿನ ನಂದಿನ ಬಡಾವಣೆಯಲ್ಲಿರುವ ಮನೆ / ವಾಣೀಜ್ಯ ಸಂಕೀರ್ಣಗಳೆಷ್ಟು;

ಆ) ಈ ಬಡಾವಣೆಯನ್ನು ಯಾವಾಗ ನಿರ್ಮಿಸಲಾಯಿತು;

ಇ) ಇಲ್ಲಿರುವ ಮನೆಗಳನ್ನು ರೆಗ್ಯುಲರೈಸ್ ಮಾಡದಿರಲು ಕಾರಣಗಳೇನು;

ಈ) ಈ ಬಡಾವಣೆಯ ಪೂರ್ತಿ ಅಭಿವೃದ್ಧಿಯಾಗಿದೆಯೇ; ಇಲ್ಲಿರುವ ಮನೆಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ವಿಧಾನ ಮಂಡಲದ ಅರ್ಜಿ ಸಮಿತಿ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಬಡಾವಣೆಯಲ್ಲಿನ ಮನೆ /ವಾಣೆಜ್ಯ ಸಂಕೀರ್ಣಗಳನ್ನು ರೆಗ್ಯುಲರೈಸ್ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಕಟ್ಟಿರುವ ಕಟ್ಟಡಗಳ ಸಂಖ್ಯೆ : 873
ಅನಧಿಕೃತ ಕಟ್ಟಡಗಳು : 5678
ಒಟ್ಟು: 6551
ವಾಣೆಜ್ಯ ಸಂಕೀರ್ಣ : 01

ಆ) 1986 ರಲ್ಲಿ ಬಡಾವಣೆ ನಿರ್ಮಿಸಲಾಗಿದೆ.